8. ಪ್ರಮಾಣ ವಚನ ಸ್ವೀಕಾರ (ಮುಂದು)

ಶ್ರೀ ಹೆಚ್.ಆರ್. ಗವಿಯಪ್ಪ	ಹೊಸಪೇಟೆ	ಆಂಗ್ಲ
ಶ್ರೀ ಗೋಪಾಲಕೃಷ್ಣ ಎನ್.ವೈ.	ಮೊಳಕಾಲ್ಮೂರು	ಕನ್ನಡ
ಶ್ರೀ ಗೋಪಾಲ ಪೂಜಾರಿ	ಬೈಂದೂರು	ಕನ್ನಡ
ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರ್	ಸಾಗರ	ಕನ್ನಡ

(ಛೇರ್ಮನ್ ಶ್ರೀ ಅಂಜನಾಮೂರ್ತಿ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

ಶ್ರೀ ಬಿ.ಜಿ. ಗೋವಿಂದಪ್ಪ	ಹೊಸದುರ್ಗ	ಕನ್ನಡ
ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ	(ಔರಾದ್)	ಕನ್ನಡ
ಶ್ರೀ ಹಕ್ಕಯ್ಯಗೊಳ್ ದತ್ತು ಯಲ್ಲಪ್ಪ	ಚಿಕ್ಕೋಡಿ	ಕನ್ನಡ

ಶ್ರೀ ನೆ.ಲ. ನರೇಂದ್ರಬಾಬು:– ಮಾನ್ಯ ಅಧ್ಯಕ್ಷರೇ, ಪ್ರಮಾಣ ವಚನ ಸ್ವೀಕರಿಸಲು ಮಾನ್ಯ ಸದಸ್ಯರ ಹೆಸರುಗಳನ್ನು ಕ್ರಮ ಸಂಖ್ಯೆ ಆಧಾರದ ಮೇಲೆ ಕರೆಯಲಾಗುತ್ತಿದೆಯೇ ಅಥವಾ ವರ್ಣಮಾಲೆ ಆಧಾರದ ಮೇಲೆ ಕರೆಯಲಾಗುತ್ತಿದೆಯೇ?

ಛೇರ್ಮನ್ (ಶ್ರೀ ಆಂಜನಾಮೂರ್ತಿಯವರು):– ಆಂಗ್ಲ ವರ್ಣಮಾಲೆಯ ಆಧಾರದ ಮೇಲೆ ಕರೆಯಲಾಗುತ್ತಿದೆ. ದಯಮಾಡಿ ಮಾನ್ಯ ಸದಸ್ಯರುಗಳು ಸಾವಧಾನದಿಂದ ಇರಬೇಕು.

ಶ್ರೀ ಹೆಚ್. ಹಾಲಪ್ಪ	ಹೊಸನಗರ	ಕನ್ನಡ
ಶ್ರೀ ಹೊನ್ನಹಳ್ಳಿ ಜಬ್ಬಾರ್ ಖಾನ್‌ಹಯತ್‌ಖಾನ್	ಹುಬ್ಬಳ್ಳಿ	ಕನ್ನಡ
ಶ್ರೀ ಇಕ್ಬಾಲ್ ಅನ್ಸಾರಿ	ಗಂಗಾವತಿ	ಕನ್ನಡ
ಶ್ರೀ ಜಗದೀಶ್ ಸಿ. ಮೆಟ್‌ಗುಡ್	ಬೈಲಹೊಂಗಲ	ಕನ್ನಡ
ಶ್ರೀ ಡಿ.ಟಿ. ಜಯಕುಮಾರ್	ನಂಜನಗೂಡು	ಕನ್ನಡ
ಶ್ರೀ ಜಾರಕಿಹೋಳಿ ರಮೇಶ್ ಲಕ್ಷ್ಮಣರಾವ್	ಗೋಕಾಕ್	ಕನ್ನಡ
ಶ್ರೀ ಡಿ.ಎನ್. ಜೀವರಾಜ್	ಶೃಂಗೇರಿ	ಕನ್ನಡ
ಶ್ರೀ ಬಿ.ಎ. ಜೀವಿಜಯ	ಸೋಮವಾರಪೇಟೆ	ಕನ್ನಡ
ಶ್ರೀ ಕಾಳಕಪ್ಪ ಗುರುಶಾಂತಪ್ಪ ಬಂಡಿ	ರೋಣ್	ಕನ್ನಡ
ಶ್ರೀ ಕಾಜೋಳ್ ಗೋವಿಂದಪ್ಪ ಮಕಟಪ್ಪ	ಮುದೋಳ್	ಕನ್ನಡ
ಶ್ರೀ ಕಟ್ಟಾಸುಬ್ರಮಣ್ಯನಾಯ್ಡು	ಶಿವಾಜಿನಗರ	ಕನ್ನಡ
ಶ್ರೀ ಕಿರಣ್ ಕುಮಾರ್ ಕೆ.ಎಸ್.	ಕಳ್ಳಂಬೆಳ್ಳ	ಕನ್ನಡ
ಶ್ರೀ ಸಿ.ಬಿ. ಕೃಷ್ಣಬೈರೇಗೌಡ	ವೇಮಗಲ್	ಕನ್ನಡ
ಶ್ರೀ ಜೆ. ಕೃಷ್ಣಪಾಲೆಮಾರ್	ಸೂರತ್ಕಲ್	ಕನ್ನಡ
ಶ್ರೀ ಎಸ್.ಎನ್. ಕೃಷ್ಣಯ್ಯಶೆಟ್ಟಿ	ಮಾಲೂರ್	ಕನ್ನಡ
ಶ್ರೀ ಕೆ.ಎಂ. ಕೃಷ್ಣಮೂರ್ತಿ	ಕಡೂರ್	ಕನ್ನಡ
ಶ್ರೀ ಎ. ಕೃಷ್ಣಪ್ಪ	ವರ್ತೂರ್	ಕನ್ನಡ
ಶ್ರೀ ಎಂ.ಟಿ. ಕೃಷ್ಣಪ್ಪ	ತುರುವೇಕೆರೆ	ಕನ್ನಡ

ಶ್ರೀ ಕುಡಚಿ ರಮೇಶ್ ಲಕ್ಷ್ಮಣ್	ಬೆಳಗಾಂ	ಕನ್ನಡ
ಶ್ರೀ ಎಸ್. ಕುಮಾರ್ ಬಂಗಾರಪ್ಪ	ಸೊರಬ	ಕನ್ನಡ
ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ	ಬೆಳ್ಳಾವಿ	ಕನ್ನಡ
ಶ್ರೀ ಲಾಲಜಿ ಆರ್. ಮೆಂಡನ್ (ಕಾಪು)	ಕಾಪು	ಕನ್ನಡ
ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ	ಅಥಣಿ	ಕನ್ನಡ
ಶ್ರೀ ಮಹದೇವ	ಕೃಷ್ಣರಾಜನಗರ	ಕನ್ನಡ
ಶ್ರೀ ಮಹಿಮಾ ಜೆ. ಪಟೇಲ್	ಚೆನ್ನಗಿರಿ	ಕನ್ನಡ
ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಕೂಬಾ	ಬಸವಕಲ್ಯಾಣ	ಕನ್ನಡ
ಶ್ರೀ ಮಾಮನಿ ವಿಶ್ವನಾಥ್ ಕರಬಸಪ್ಪ	ಪರಸಗಡ	ಕನ್ನಡ
ಶ್ರೀ ಮನೋಹರ್ ಕಲ್ಲಪ್ಪ ಕಿಣೇಕರ್	ಉಚಗಾಂವ್	ಮರಾಠಿ

12.30 ಪಿಎಂ

9. ಪ್ರಮಾಣವಚನ ಸ್ವೀಕಾರದ ಬಗ್ಗೆ ಆಕ್ಷೇಪಣೆ

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ತಮ್ಮಲ್ಲಿ ತಿಳಿದುಕೊಳ್ಳಬೇಕು. ಪ್ರಮಾಣವಚನವನ್ನು ಯಾರ್ಯಾರ ಹೆಸರಿನಲ್ಲಿ ಬೇಕಾದರೂ ಮಾಡಬಹುದಾ? ಈ ಸದನಕ್ಕೆ ತಾವು ಸ್ವಲ್ಪ ತಿಳುವಳಿಕೆ ಕೊಡಬೇಕು. ಏಕೆಂದರೆ ಯಾರ ಹೆಸರಿನಲ್ಲಿ ಬೇಕಾದರೂ ಪ್ರಮಾಣ ವಚನ ತೆಗೆದುಕೊಳ್ಳಬಹುದಾ? ಸಂವಿಧಾನಬದ್ಧವಾಗಿ ಯಾರ ಹೆಸರಿನಲ್ಲಿ ಪ್ರಮಾಣ ಮಾಡಬೇಕು? ಭಗವಂತನ ಹೆಸರಿನಲ್ಲಿ ಮಾಡಬೇಕು, ಇಲ್ಲವೇ ಸತ್ಯ, ನಿಷ್ಠೆ ಹೆಸರಿನಲ್ಲಿ ಮಾಡಬೇಕು. ಅದನ್ನು ಬಿಟ್ಟರೆ ಊರಿನಲ್ಲಿರುವ ದೇವರುಗಳು, ಊರಿನಲ್ಲಿರುವ ತಂದೆ ತಾಯಿಗಳು, ಎಲ್ಲರ ಹೆಸರಿನಲ್ಲಿ ಪ್ರಮಾಣ ವಚನ ತೆಗೆದುಕೊಳ್ಳಬಹುದಾ? ಇದೇನಿದು?

ಛೇರ್ಮನ್:– ಮಾನ್ಯ ವಾಟಾಳ್ ನಾಗರಾಜ್ ಅವರೇ, ತಾವು ಹಿರಿಯ ಸದಸ್ಯರು.

ಶ್ರೀ ವಾಟಾಳ್ ನಾಗರಾಜ್:– ದಯಮಾಡಿ, ತಾವು ಈ ಸದನಕ್ಕೆ ತಿಳುವಳಿಕೆ ಕೊಡಬೇಕು.

ಛೇರ್ಮನ್:– ಪ್ರಮಾಣ ವಚನ ಮಾಡುತ್ತಾರೆಯೇ ಹೊರತು, ಇದರಲ್ಲಿ ಇಲ್ಲದಿರುವುದನ್ನು ಪ್ರಮಾಣ ಮಾಡುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಎಲ್ಲಿದೆ ಹೇಳಿ? ಎಲ್ಲರ ಹೆಸರಿನಲ್ಲೂ ಪ್ರಮಾಣ ವಚನ ತೆಗೆದುಕೊಳ್ಳಬಹುದಾ?

ಛೇರ್ಮನ್:– ಪ್ರಮಾಣ ವಚನ ಇಂತಹದೇ ಭಾಷೆಯಲ್ಲಿ ಮಾಡಿ ಎಂದು ಕಂಡೀಷನ್ ಹಾಕುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಯಾವ್ಯಾವ ಭಾಷೆಯಲ್ಲೋ ಮಾಡುತ್ತಿದ್ದಾರೆ, ಇದು ನನಗೆ ಅರ್ಥ ಆಗುತ್ತಿಲ್ಲ. ಇದು ಯಾವ ರಾಜ್ಯ ಎಂಬುದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಈ ರಾಜ್ಯದಲ್ಲಿ ಕರ್ನಾಟಕದಲ್ಲಿ ಗೆದ್ದು ಕನ್ನಡಿಗರ ಮತವನ್ನು ಪಡೆದು ಬೇರೆ ಭಾಷೆಯಲ್ಲಿ ಪ್ರಮಾಣ ತೆಗೆದುಕೊಳ್ಳುವುದು ನಾಚಿಕೆಗೇಡು.